# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 602
**ಮಾನ್ಯ ಸದಸ್ಯರ ಹೆಸರು** : ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
**ಉತ್ತರಿಸಬೇಕಾದ ದಿನಾಂಕ** : 19-09-2022
**ಉತ್ತರಿಸುವ ಸಚಿವರು** : ಪ್ರವಾಸೋದ್ಯಮ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಲ್ಲಿ ಇರುವ ಟಿಪ್ಪು ಕೋಟೆಯ ಕೆಲವು ಭಾಗಗಳು ಶಿಥಿಲಗೊಂಡು ನಶಿಸಿ ಹೋಗುವ ಹಂತಕ್ಕೆ ತಲುಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕೋಟೆಯನ್ನು ಅಭಿವೃದ್ಧಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಲ್ಲಿರುವ ಟಿಪ್ಪು ಕೋಟೆಯು ಕೇಂದ್ರ ಸರ್ಕಾರದ ಅಡಿಯಲ್ಲಿ ಬರುವ ಭಾರತೀಯ ಪುರಾತತ್ವ ಸರ್ವೇಕ್ಷಣಾ (Archaeological Survey of India) ಇಲಾಖೆಯ ವ್ಯಾಪ್ತಿಗೆ ಬರುತ್ತದೆ.<br><br>ನವೆಂಬರ್-2021ರಲ್ಲಿ ಸದರಿ ಕೋಟೆಯ ಪಶ್ಚಿಮ ದ್ವಾರದ ಬಳಿಯ ಆವರಣ ಗೋಡೆಯ ಕೆಲವು ಭಾಗವು ಹಾಗೂ ಉತ್ತರ ಭಾಗದ ಕೋಟೆಯ ಭದ್ರ ಕೋಟೆಯು ಕುಸಿದಿರುತ್ತದೆ. ದಿನಾಂಕ: 10.09.2022ರಂದು ಭಾರೀ ಮಳೆಯಿಂದ ಕೋಟೆಯ ಆಗ್ನೇಯ ಗೋಡೆಯ ಕೆಲವು ಭಾಗವು ಕುಸಿದಿರುತ್ತದೆ. ಈ ಸಂಬಂಧ ಭಾರತೀಯ ಪುರಾತತ್ವ ಸರ್ವೇಕ್ಷಣಾ (ಎ.ಎಸ್.ಐ.) ಇಲಾಖೆಯು ಹಾನಿಯಾಗಿರುವ ಆವರಣ ಗೋಡೆಯ ಪುನರ್ ನಿರ್ಮಾಣ ಕಾಮಗಾರಿಯನ್ನು ಈಗಾಗಲೇ ಮೇ-2022ರಲ್ಲಿ ಕೈಗೊಂಡು ಪೂರ್ಣಗೊಳಿಸಿರುತ್ತದೆ. ಸದರಿ ಕೋಟೆಯ ಇತರ ಹಾನಿಯಾಗಿರುವ ಭಾಗಗಳ ಮರು ನಿರ್ಮಾಣ ಹಾಗೂ ಸಂರಕ್ಷಣಾ ಕಾಮಗಾರಿಗಳನ್ನು ಶೀಘ್ರದಲ್ಲಿಯೇ ಕೈಗೊಳ್ಳಲಾಗುವುದು. |
| ಆ) | ಈ ಕೋಟೆಯನ್ನು ಅಭಿವೃದ್ಧಿಪಡಿಸಿ ಪ್ರವಾಸಿಗರಿಗೆ ಉತ್ತಮ ಸೌಕರ್ಯಗಳನ್ನು ಕಲ್ಪಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಈ ಕೋಟೆಯನ್ನು ಅಭಿವೃದ್ಧಿಗೊಳಿಸಲಾಗುವುದು? (ವಿವರ ನೀಡುವುದು) | ಸದರಿ ಕೋಟೆಯ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳಾದ ಕಲ್ಲುಬೆಂಚು ಅಳವಡಿಕೆ, ಕುಡಿಯುವ ನೀರಿನ ಸೌಲಭ್ಯ, ಸಾಂಸ್ಕೃತಿಕ ಸೂಚನಾ ಫಲಕಗಳ ಅಳವಡಿಕೆ, ಸುರಕ್ಷತಾ ತಿಳುವಳಿಕೆ ಫಲಕಗಳ ಅಳವಡಿಕೆ ಹಾಗೂ ಸೋಲಾರ್ ದೀಪಗಳ ಅಳವಡಿಕೆ ಕಾಮಗಾರಿಗಳನ್ನು 2022-23ನೇ ಸಾಲಿನಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯಿಂದ ಕೈಗೊಳ್ಳಲಾಗುವುದು.<br><br>ಇದಲ್ಲದೆ, ಸರ್ಕಾರದ ಆದೇಶ ಸಂಖ್ಯೆ: ಪ್ರಇ 327 ಪ್ರವಾಯೋ 2018, ದಿ: 07.12.2018ರಲ್ಲಿ ದೇವನಹಳ್ಳಿ ಕೋಟೆ ಪ್ರದೇಶದಲ್ಲಿ ಕೋಟೆ ಗೋಡೆಯ ಸುತ್ತ ಕಾಲುದಾರಿ, ವಾಹನ ನಿಲ್ದಾಣ, ಪ್ರವೇಶ ದ್ವಾರ ವಿನ್ಯಾಸ, ಎರಡು ಬದಿಯ ರಸ್ತೆಗಳಲ್ಲಿ ಪೇವ್‌ಮೆಂಟ್ ಅಳವಡಿಕೆ, ಶೌಚಾಲಯ, ಡಸ್ಟಬಿನ್, ಬೀದಿ ದೀಪಗಳು, ನಾಮಫಲಕಗಳು, ಕೋಟೆ ಸಂಪರ್ಕ ಅಭಿವೃದ್ಧಿ, ಸರೋವರ ಟ್ಯಾಂಕ್ ಅಭಿವೃದ್ಧಿ, ಘಾಟ್ ಅಭಿವೃದ್ಧಿ, ಕಲ್ಯಾಣಿ ಅಭಿವೃದ್ಧಿ ಇತ್ಯಾದಿ ಕಾಮಗಾರಿಗಳನ್ನು ರೂ.230.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಟಿ.ಐ.ಎಲ್. ರವರ ಮೂಲಕ ಲೋಕೋಪಯೋಗಿ ಇಲಾಖೆಯಿಂದ ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ: ಟಿಒಆರ್/54/ಟಿಡಿಪಿ/2021, ದಿನಾಂಕ: 23.08.2021 ರಲ್ಲಿ ಸದರಿ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯ ಬದಲಾಗಿ ಮಹಾನಿರ್ದೇಶಕರು, ಭಾರತೀಯ ಪುರಾತತ್ವ ಸರ್ವೇಕ್ಷಣೆ, ನವದೆಹಲಿ, ಇವರ ಮೂಲಕ ಕೈಗೊಳ್ಳಲು ಪರಿಷ್ಕೃತ ಮಂಜೂರಾತಿ ನೀಡಲಾಗಿದೆ.<br><br>ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಅಗತ್ಯವಾಗಿರುವ ಜಮೀನಿನ ಬಗ್ಗೆ ಪರಿಶೀಲಿಸಿ ವರದಿ ನೀಡುವಂತೆ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರಿಗೆ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಇವರಿಂದ ದಿ: 12.08.2022ರಂದು ಪತ್ರ ಬರೆಯಲಾಗಿದ್ದು, ವರದಿ ನಿರೀಕ್ಷಿಸಿದೆ. |

**TOR 267 TDV 2022**

**(ಆನಂದ್ ಸಿಂಗ್)**
ಪ್ರವಾಸೋದ್ಯಮ,
ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು